# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 20.11.2021 ರಂದು ಬೆಳಿಗ್ಗೆ 11.30 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಿಂಗಸಂದ್ರ ವಾರ್ಡ್ ಸಂಖ್ಯೆ-191 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ಪ್ರಸನ್ನಕುಮಾರ.ವಿ. ಉಪ-ಆಯುಕ್ತರು ರವರ ಸಮ್ಮುಖದಲ್ಲಿ ಅವರ ಅನುಮತಿಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ಪ್ರಾರಂಭದಲ್ಲಿ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಎ.ಪಿ.ಶಿವಕುಮಾರ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-191, ಸಿಂಗಸಂದ್ರ ರವರು ಸಭೆಗೆ ಹಾಜರಾಗಿರುವ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

ಹಿಂದಿನ ಸಭೆಯ ನಡಾವಳಿಗಳನ್ನು ಸಭೆಯಲ್ಲಿ ಮಂಡಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ಹಿಂದಿನ ಸಭೆಯ ನಡಾವಳಿಗಳ ಪಾಲನೆಯ ಬಗ್ಗೆ ಮಾಹಿತಿ ಪಡೆಯಲಾಯಿತು. ಅದರಂತೆ ಇಂದಿನ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಈ ಕೆಳಕಂಡಂತಿರುತ್ತದೆ.

1.ಕೋವಿಡ್-19 ಮಹಾಮಾರಿ ಸಾಂಕ್ರಮಿಕರೋಗ ಹರಡದಂತೆ ಮುಂಜಾಗ್ರತಕ್ರಮ ಕೈಗೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು.
2.ವಿಪತ್ತು ನಿರ್ವಹಣಾ ಸಮಿತಿ(ಡಿಸಾಸ್ಟರ್ ಮ್ಯಾನೇಜಮೆಂಟ್‌ಕಮಿಟಿ) ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ.
3.ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವುದು.
4.ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸುವುದು.
5.ಮಳೆಯಿಂದ ಸಂಭವಿಸಿದ/ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಕ್ರಮ ಕೈಗೊಳ್ಳವ ಬಗ್ಗೆ ಚರ್ಚಿಸುವುದು.
6.BWSSB Project ಮತ್ತು ನಿರ್ವಹಣೆಯ ಬಗ್ಗೆ ಚರ್ಚಿಸುವುದು.
7.ಕುಡಿಯುವನೀರು ಸರಬರಾಜು ಬಗ್ಗೆಚರ್ಚಿಸುವುದು.
8.ಗೇಲ್‌ಗ್ಯಾಸ್ ಪೈಪ್ ಲೈನ್ ನಿರ್ವಹಣೆಯ ಬಗ್ಗೆ ಚರ್ಚಿಸುವುದು.

ಸಭೆಯ ನಡಾವಳಿಗಳು

1. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್‌ನ ಕೂಡ್ಲು ಗ್ರಾಮದಲ್ಲಿ ಮ್ಯಾನ್‌ಹೋಲ್‌ಗಳು ಒಡೆದಿದ್ದು, ಮತ್ತು ಮ್ಯಾನ್‌ಹೋಲ್‌ನಲ್ಲಿ ಸಿಲ್ಟ್ ಅನ್ನು ತೆಗೆಯಬೇಕಾಗಿದೆ. ಸ್ಯಾನಿಟರಿ ನೀರು ಸರಾಗವಾಗಿ ಹೋಗುತ್ತಿಲ್ಲವೆಂದು ಎಂದು ಸ್ಥಳಿಯರು ದೂರನ್ನು ನೀಡಿದರು. ಬಿ.ಡಬ್ಲ್ಯು.ಎಸ್.ಎಸ್.ಬಿ ಯವರು ಒಳಚರಂಡಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಬೇಕೆಂದು ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ ಮತ್ತು ಎಲ್ & ಟಿ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

2. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್‌ನ ಕೂಡ್ಲು ಗ್ರಾಮದಲ್ಲಿ ಎಲ್ಲಾ ರಸ್ತೆಗಳು ಹಾಳಾಗಿದ್ದು, ಸಾರ್ವಜನಕರು ಓಡಾಡಲು ತುಂಬಾ ತೊಂದರೆಯಾಗಿದೆ ಎಂದು ಸ್ಥಳಿಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. ಅದಕ್ಕೆ ಸಂಬಂದಿಸಿದಂತೆ ಕಾರ್ಯ ನಿರ್ವಹಿಸಲು ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ಸೂಚಿಸಿದರು.

3. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಣಿಪಾಲ್ ಕೌಂಟಿ ಮುಖ್ಯರಸ್ತೆಯಲ್ಲಿ ಹಂದಿ. ಮತ್ತು ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸಲು ಸ್ಥಳಿಯರಾದ ಶ್ರೀಮತಿ ಅರುಂದತಿನಾಗ ರವರು ಸಭೆಯಲ್ಲಿ ತಿಳಿಸಿದರು. ನೋಡಲ್ ಅಧಿಕಾರಿಗಳು ಇದರ ಬಗ್ಗೆ ಕ್ರಮ ವಹಿಸಲು ಸಹಾಯಕ ಅಭಿಯಂತರರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಿದರು.

4. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಣಿಪಾಲ್ ಕೌಂಟಿ ಮುಖ್ಯರಸ್ತೆಯಲ್ಲಿ ಬೀದಿಬದಿ ವ್ಯಾಪಾರಿಗಳು ಫುಟ್ ಪಾತ್ ಮೇಲೆ ಅಂಗಡಿಗಳು ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದೆ. ಎಂದು ಸ್ಥಳಿಯರಾದ ಶ್ರೀಮತಿ ಅರುಂದತಿನಾಗ್ ರವರು ತಮ್ಮ ಸಮಸ್ಯೆಯನ್ನು ತಿಳಿಸಿದರು. ಇದಕ್ಕೆ ಸಂಬಂದಿಸಿದಂತೆ ಬೀದಿಬದಿ ಅಂಗಡಿಗಳನ್ನು ತೆರವುಗೊಳಿಸಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

5. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಬರುವ ನಾಗನಾಥಪುರ ಗ್ರಾಮದ ಸೆಂಟ್ರಲ್ ಜೈಲ್ ರೋಡ್ 2ನೇ ಅಡ್ಡರಸ್ತೆ ಕೃಷ್ಣಪ್ಪ ಲೇಔಟ್‌ನಲ್ಲಿ ಮೋರಿ ಬ್ಲಾಕ್ ಆಗಿದ್ದು, ಅದನ್ನು ಸರಿಪಡಿಸಬೇಕೆಂದು ವಾರ್ಡ್ ಸಮಿತಿ ಸದಸ್ಯರಾದ ಶ್ರೀಮತಿ ಗೀತ ರವರು ತಿಳಿಸಿದರು. ಅದಕ್ಕೆ ಸಂಬಂದಿಸಿದಂತೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

6. ಪರಪ್ಪನಅಗ್ರಹಾರ ನಿರಾಶ್ರಿತರು ವಾಸವಾಗಿರುವ ಕೂಡ್ಲು ಸರ್ವೆ ನಂ 148 ರಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದು, ರಸ್ತೆ ಚರಂಡಿಗಳನ್ನು ಮಾಡಿಕೊಂಡಿದ್ದು, ಮುಂದುವರಿದ ಕಾಮಗಾರಿಗಳು ಮಾಡಬೇಕೆಂದು (ಬಂದಿಖಾನೆ ಬಡಾವಣೆ ಚೂಡಸಂದ್ರ ಸರ್ಕಲ್) ಸ್ಥಳಿಯರಾದ ಶ್ರೀ ಮುನಿಯಪ್ಪ ರವರು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಸಂಬಂದಿಸಿದಂತೆ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

7. ಸಿದ್ದರೆಡ್ಡಿ ಬಿಲ್ಡಿಂಗ್ ಕೂಡ್ಲು ಮೇನ್ ರೋಡ್ ಮ್ಯಾನ್ ಹೋಲ್ ನಲ್ಲಿ ಸಿಲ್ಟ್ ತೆಗೆಯಬೆಕೆಂದು ಲೋಕೇಶ್ ರೆಡ್ಡಿ ರವರು ಸಭೆಯಲ್ಲಿ ತಿಳಿಸಿದರು.

8. ಸಾಯಿಪೂರ್ಣ ಅಪಾರ್ಟ್‌ಮೆಂಟ್ ರವರು ಎಸ್.ಟಿ.ಪಿ ನೀರನ್ನು ಮೋರಿಗೆ ಬಿಡುತ್ತಿದ್ದಾರೆ ಎಂದು ನಾಗರಾಜ್ ರವರು ಸಭೆಯಲ್ಲಿ ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿ ಮತ್ತು ಸಂಚಾಲಕರು | ವಾರ್ಡ್ ಕಮಿಟಿ ಅಧ್ಯಕ್ಷರು |
| ವಾರ್ಡ್ ನಂ -191 ಸಿಂಗಸಂದ್ರ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| | ವಾರ್ಡ್ ನಂ 191, ಸಿಂಗಸಂದ್ರ |

ಪ್ರತಿಗಳು:-

1) ಮಾನ್ಯ ಆಡಳಿತಗಾರರು, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ಶಾಸಕರು, ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರರವರ ಅವಗಾಹನೆಗೆ ಸಲ್ಲಿಸಿದೆ
4) ಮಾನ್ಯ ಶಾಸಕರು, ಬೆಂಗಳೂರು ದಕ್ಷಿಣ ವಿಧಾನ ಸಭಾಕ್ಷೇತ್ರರವರ ಅವಗಾಹನೆಗೆ ಸಲ್ಲಿಸಿದೆ
5) ಮಾನ್ಯ ಶಾಸಕರು, ಆನೇಕಲ್ ವಿಧಾನ ಸಭಾಕ್ಷೇತ್ರರವರ ಅವಗಾಹನೆಗೆ ಸಲ್ಲಿಸಿದೆ
6) ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ
7) ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆಗೆ ಮಂಡಿಸಿದೆ.
8) ಉಪ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆಗೆ ಮಂಡಿಸಿದೆ
9) ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯರವರಿಗೆ ಸೂಕ್ತ ಕ್ರಮಕ್ಕಾಗಿ
10ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯರವರಿಗೆ ಸೂಕ್ತ ಕ್ರಮಕ್ಕಾಗಿ
11) ಅರಣ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯರವರಿಗೆ ಸೂಕ್ತ ಕ್ರಮಕ್ಕಾಗಿ
12) ಡಿ.ಜಿ.ಎಂ. ಗೇಲ್‌ಗ್ಯಾಸ್‌ರವರಿಗೆ ಮುಂದಿನ ಕ್ರಮಕ್ಕಾಗಿ,

13) ಮುಖ್ಯಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಅವಗಾಹನೆಗೆ ಕಳುಹಿಸಿದೆ
14) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕಾಗಿ
15) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಎಂ.ಆರ್.ಸಿ.ಎಲ್ ರವರಿಗೆ ಮುಂದಿನ ಕ್ರಮಕ್ಕಾಗಿ
16) ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ, ಬೃ.ಬೆಂ.ಮ.ಪಾ. ರವರಿಗೆ ಮುಂದಿನ ಕ್ರಮಕ್ಕಾಗಿ
17) ಪಿ.ಎಸ್.ಐ. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರ, ಪರಪ್ಪನಅಗ್ರಹಾರಠಾಣೆ,
18) ಕಂದಾಯ ಅಧಿಕಾರಿ (ಬೇಗೂರು) ವಲಯರವರ ಅವಗಾಹನೆಗೆ ಮಂಡಿಸಿದೆ
19) ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.
20)ಕಛೇರಿಕಡತಕ್ಕೆ